**2 ನೇ ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು ಜೆಎಂಎಫ್‌ಸಿ ನ್ಯಾಯಾಲಯ, ಹರಿಹರ**

ಸಿ.ಸಿ. ನಂ. **1227/2026**

ಫಿರ್ಯಾದುದಾರರು ವಿರುದ್ಧ ಆರೋಪಿತರು

ಕರ್ನಾಟಕ ಸರ್ಕಾರದ ಪರವಾಗಿ
ಮಲೇಬೆನ್ನೂರು ಪೊಲೀಸ್ ಠಾಣೆ,
ಮಲೇಬೆನ್ನೂರು.

ಬೀರಪ್ಪ ಮತ್ತು ಇತರರು

**ದೋಷಾರೋಪಣೆ**

**ನಾನು ಶ್ರೀ ಬೀರಪ್ಪ ಕಾಂಬ್ಳೆ, ಬಿ.ಎ., ಎಲ್‌ಎಲ್.ಬಿ., ಸಿವಿಲ್ ಜಡ್ಜ್ ಮತ್ತು ಪ್ರ.ದ.ನ್ಯಾ..ದಂ. ಹರಿಹರ ಈ ಮೂಲಕ ಆರೋಪಿತರಾದ**

ಆರೋಪಿಗಳುಃ 1) ಬೀರಪ್ಪ ತಂದೆ ಸಿದ್ದಲಿಂಗಪ್ಪ ಭಾನುವಳ್ಳಿ, 56 ವರ್ಷ, ಕೃಷಿಕರು,

2) ಸಿದ್ದಪ್ಪ ಭಾನುವಳ್ಳಿ ತಂದೆ ಸಿದ್ದಲಿಂಗಪ್ಪ ಭಾನುವಳ್ಳಿ, 54 ವರ್ಷ, ಕೃಷಿಕರು

3) ದೇವರಾಜ ತಂದೆ ಭಾನುವಳ್ಳಿ ಬೀರಪ್ಪ, 25 ವರ್ಷ, ಕೃಷಿಕರು

4) ನಾಗರಾಜ ತಂದೆ ಭಾನುವಳ್ಳಿ ಸಿದ್ದಪ್ಪ, 28 ವರ್ಷ, ಕೃಷಿಕರು,

5) ಬೀರೇಶ್ ತಂದೆ ಭಾನುವಳ್ಳಿ ಸಿದ್ದಪ್ಪ, 24 ವರ್ಷ, ಕೃಷಿಕರು,

ಎಲ್ಲರ ವಾಸಃ ಕುಣೆಬೆಳಕೆರೆ ಗ್ರಾಮ, ಹರಿಹರ ತಾಲ್ಲೂಕು, ದಾವಣಗೆರೆ.

ನಿಮ್ಮ ಮೇಲೆ ಮಾಡುವ ದೋಷಾರೋಪಣೆ ಏನೆಂದರೆಃ

1 ರಿಂದ 5 ಆರೋಪಿತರೆಲ್ಲರೂ ಸೇರಿ ಹರಿಹರ ತಾಲ್ಲೂಕು ಕುಣೆಬೆಳಕೆರೆ ಗ್ರಾಮದ ವಾಸಿಗಳಾಗಿದ್ದು, ತಮ್ಮ ಗ್ರಾಮದ ಹತ್ತಿರ ರಿ.ಸ.ನಂ. 157/2 ಎ ರಲ್ಲಿ 24 ಗುಂಟೆ ಜಮೀನು ಇದ್ದು, ಸದರಿ ಜಮೀನಿನ ಪಕ್ಕದಲ್ಲಿ ಚಾಸಾ 1 ರವರ ರಿ.ಸ.ನಂ.157/2 ಪಿ2 ರಲ್ಲಿ 37 ಗುಂಟೆ ಜಮೀನು ಇರುತ್ತದೆ. ಸದರಿ ಜಮೀನಿನಲ್ಲಿ ಭತ್ತವನ್ನು ಬೆಳೆಯುತ್ತಿದ್ದು, ಇತ್ತಿಚಿಗೆ ಆರೋಪಿತರು ಹಾಗೂ ಚಾಸಾ 1 ರವರ ಜಮೀನಿನ ದಿಂಡನ್ನು ತೆಗೆಯುವ ವಿಚಾರದಲ್ಲಿ ಆಗಾಗ ಜಗಳ ಮಾಡುತ್ತಿರುತ್ತಿರಾ. ದಿನಾಂಕಃ 30.01.2026 ರಂದು ಮಧ್ಯಾಹ್ನ 02.45 ಗಂಟೆ ಸಮಯದಲ್ಲಿ ಆರೋಪಿತರು ಕಾನೂನುಬಾಹಿರವಾಗಿ ಅಕ್ರಮ ಗುಂಪು ಕಟ್ಟಿಕೊಂಡು ಚಾಸಾ 1, 4, 5 ರವರ ಜೊತೆ ಜಗಳು ಮಾಡಲು ಹೋಗಿರುತ್ತಾರೆ. ಹಾಗಾಗಿ ಆರೋಪಿತರಾದ ನೀವು ಭಾರತೀಯ ನ್ಯಾಯ ಸಂಹಿತೆ ಕಲಂ.189(2) ಸಹವಾಚಕ ಕಲಂ 190 ರಡಿಯಲ್ಲಿ ಶಿಕ್ಷಾರ್ಹ ಅಪರಾಧವನ್ನು ಈ ನ್ಯಾಯಾಲಯದ ಸಂಜ್ಞಾನದಲ್ಲಿ ಎಸಗಿರುತ್ತೀರಿ.

2 ನೇಯದಾಗಿ, ಮೇಲೆ ಹೇಳಿದ ದಿನಾಂಕ, ಸಮಯ ಮತ್ತು ಸ್ಥಳದಲ್ಲಿ ಆರೋಪಿತರಾದ ನೀವುಗಳು ಕೃತ್ಯ ಎಸಗುವ ಏಕೋದ್ದೇಶದಿಂದ ಅಕ್ರಮ ಗುಂಪುಕಟ್ಟಿಕೊಂಡು ಬಂದು ದೊಂಬಿ ಉಂಟು ಮಾಡಿರುತ್ತೀರಿ. ಹಾಗಾಗಿ ಆರೋಪಿತರಾದ ನೀವು ಭಾರತೀಯ ನ್ಯಾಯ ಸಂಹಿತೆ ಕಲಂ.191(2) ಸಹವಾಚಕ ಕಲಂ 190 ರಡಿಯಲ್ಲಿ ಶಿಕ್ಷಾರ್ಹ ಅಪರಾಧವನ್ನು ಈ ನ್ಯಾಯಾಲಯದ ಸಂಜ್ಞಾನದಲ್ಲಿ ಎಸಗಿರುತ್ತೀರಿ.

3 ನೇಯದಾಗಿ, ಮೇಲೆ ಹೇಳಿದ ದಿನಾಂಕ, ಸಮಯ ಮತ್ತು ಸ್ಥಳದಲ್ಲಿ ಆರೋಪಿತರಾದ ನೀವುಗಳು ಕೃತ್ಯ ಎಸಗುವ ಏಕೋದ್ದೇಶದಿಂದ ಅಕ್ರಮ ಗುಂಪುಕಟ್ಟಿಕೊಂಡು 1 ಮತ್ತು 2 ನೇ ಆರೋಪಿತರಾದ ನೀವು ಚಾಸಾ 1 ಮತ್ತು 4 ರವರಿಗೆ ಜಮೀನು ಒತ್ತುವರಿ ಮಾಡಿರುತ್ತಿರಿ ಅಂತ ಕಟ್ಟಿಗೆಗಳಿಂದ ಅವರಿಬ್ಬರ ತಲೆಗೆ ಹೊಡೆದಿರುತ್ತಿರಾ. ಹಾಗಾಗಿ ಆರೋಪಿತರಾದ ನೀವು ಭಾರತೀಯ ನ್ಯಾಯ ಸಂಹಿತೆ ಕಲಂ.191(3) ಸಹವಾಚಕ ಕಲಂ 190 ರಡಿಯಲ್ಲಿ ಶಿಕ್ಷಾರ್ಹ ಅಪರಾಧವನ್ನು ಈ ನ್ಯಾಯಾಲಯದ ಸಂಜ್ಞಾನದಲ್ಲಿ ಎಸಗಿರುತ್ತೀರಿ.

4 ನೇಯದಾಗಿ, ಮೇಲೆ ಹೇಳಿದ ದಿನಾಂಕ, ಸಮಯ ಮತ್ತು ಸ್ಥಳದಲ್ಲಿ ಆರೋಪಿತರಾದ ನೀವುಗಳು ಕೃತ್ಯ ಎಸಗುವ ಏಕೋದ್ದೇಶದಿಂದ ಅಕ್ರಮ ಗುಂಪುಕಟ್ಟಿಕೊಂಡು ಬಂದು 3, 5 ಮತ್ತು 5 ನೇ ಆರೋಪಿತರಾದ ನೀವು ಚಾಸಾ 5 ರವರಿಗೆ ಕಾಲುಗಳಿಂದ ಹೊಡೆದಿರುತ್ತಿರಾ. ಹಾಗಾಗಿ ಆರೋಪಿತರಾದ ನೀವು ಭಾರತೀಯ ನ್ಯಾಯ ಸಂಹಿತೆ ಕಲಂ.115(2) ಸಹವಾಚಕ ಕಲಂ 190 ರಡಿಯಲ್ಲಿ ಶಿಕ್ಷಾರ್ಹ ಅಪರಾಧವನ್ನು ಈ ನ್ಯಾಯಾಲಯದ ಸಂಜ್ಞಾನದಲ್ಲಿ ಎಸಗಿರುತ್ತೀರಿ.

5 ನೇಯದಾಗಿ, ಮೇಲೆ ಹೇಳಿದ ದಿನಾಂಕ, ಸಮಯ ಮತ್ತು ಸ್ಥಳದಲ್ಲಿ ಆರೋಪಿತರಾದ ನೀವುಗಳು ಕೃತ್ಯ ಎಸಗುವ ಏಕೋದ್ದೇಶದಿಂದ ಅಕ್ರಮ ಗುಂಪುಕಟ್ಟಿಕೊಂಡು ಬಂದು 1 ಮತ್ತು 2 ನೇ ಆರೋಪಿತರಾದ ನೀವು ಚಾಸಾ 1 ಮತ್ತು 4 ರವರಿಗೆ ಜಮೀನು ಒತ್ತುವರಿ ಮಾಡಿರುತ್ತಿರಿ ಅಂತ ಕಲ್ಲುಗಳಿಂದ ಅವರಿಬ್ಬರ ತಲೆಗೆ ಹೊಡೆದಿರುತ್ತಿರಾ. ಹಾಗಾಗಿ ಆರೋಪಿತರಾದ ನೀವು ಭಾರತೀಯ ನ್ಯಾಯ ಸಂಹಿತೆ ಕಲಂ.118(1) ಸಹವಾಚಕ ಕಲಂ.190 ರಡಿಯಲ್ಲಿ ಶಿಕ್ಷಾರ್ಹ ಅಪರಾಧವನ್ನು ಈ ನ್ಯಾಯಾಲಯದ ಸಂಜ್ಞಾನದಲ್ಲಿ ಎಸಗಿರುತ್ತೀರಿ.

6 ನೇಯದಾಗಿ, ಮೇಲೆ ಹೇಳಿದ ದಿನಾಂಕ, ಸಮಯ ಮತ್ತು ಸ್ಥಳದಲ್ಲಿ ಆರೋಪಿತರಾದ ನೀವುಗಳು ಕೃತ್ಯ ಎಸಗುವ ಏಕೋದ್ದೇಶದಿಂದ ಅಕ್ರಮ ಗುಂಪುಕಟ್ಟಿಕೊಂಡು ಬಂದು ಸಾಕ್ಷಿ.1 ಮತ್ತು 5 ರವರಿಗೆ ಸುಳೇಮಕ್ಕಳಾ ಜಮೀನನ್ನು ಒತ್ತುವರಿ ಮಾಡುತ್ತಿರಾ ಅಂತಾ ಅವಾಚ್ಯ ಶಬ್ದಗಳಿಂದ ಬೈದ್ದಿರುತ್ತೀರಿ. ಹಾಗಾಗಿ

ಆರೋಪಿತರಾದ ನೀವು ಭಾರತೀಯ ನ್ಯಾಯ ಸಂಹಿತೆ ಕಲಂ. 352 ಸಹ ಕಲಂ. 190 ರಡಿಯಲ್ಲಿ ಶಿಕ್ಷಾರ್ಹ ಅಪರಾಧವನ್ನು ಈ ನ್ಯಾಯಾಲಯದ ಸಂಜ್ಞಾನದಲ್ಲಿ ಎಸಗಿರುತ್ತೀರಿ.

7 ನೇಯದಾಗಿ, ಮೇಲೆ ಹೇಳಿದ ದಿನಾಂಕ, ಸಮಯ ಮತ್ತು ಸ್ಥಳದಲ್ಲಿ ಆರೋಪಿತರಾದ ನೀವುಗಳು ಕೃತ್ಯ ಎಸಗುವ ಏಕೋದ್ದೇಶದಿಂದ ಸಾಕ್ಷಿ.1, 4 ಮತ್ತು 5 ರವರಿಗೆ ನಿಮ್ಮನ್ನು ಮಾತ್ರಾ ಜೀವಂತವಾಗಿ ಉಳಿಸುವುದಿಲ್ಲ ಅಂತಾ ಪ್ರಾಣ ಬೆದರಿಕೆ ಹಾಕಿರುತ್ತೀರಿ. ಹಾಗಾಗಿ ಆರೋಪಿತರಾದ ನೀವು ಭಾರತೀಯ ನ್ಯಾಯ ಸಂಹಿತೆ ಕಲಂ.351(2) ಸಹವಾಚಕ ಕಲಂ 190 ರಡಿಯಲ್ಲಿ ಶಿಕ್ಷಾರ್ಹ ಅಪರಾಧವನ್ನು ಈ ನ್ಯಾಯಾಲಯದ ಸಂಜ್ಞಾನದಲ್ಲಿ ಎಸಗಿರುತ್ತೀರಿ.

ಆರೋಪಿತರಾದ ನೀವುಗಳು ಮೇಲ್ಕಂಡ ಅಪರಾಧಗಳಿಗೆ ಇದೇ ನ್ಯಾಯಾಲಯದಲ್ಲಿ ನನ್ನ ಮುಂದೆ ವಿಚಾರಣೆಗೆ ಗುರಿಯಾಗತಕ್ಕದ್ದು ಎಂದು ನಿರ್ದೇಶಿಸಿರುತ್ತೇನೆ.

Sd/-

ದಿನಾಂಕಃ 11.08.2026 — C/c 2 ನೇ ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು

ಸ್ಥಳಃ ಹರಿಹರ — ಜೆಎಂಎಫ್ ಸಿ, ಹರಿಹರ.